ಅರ್ಚಕನಂತಿದ್ದನು. ಬೆಂಗಳೂರಿನ ಸಿಟಿಬಸ್ಸುಗಳಲ್ಲೂ ಇಂಥವರನ್ನು ಕಂಡಿದ್ದೇನೆ. ಅಣ್ಣಾವರ ಸ್ಟಿಕರುಗಳಿಂದ ಬಸ್ಸನ್ನಲಂಕರಿಸಿ, 'ರಕ್ತಕೊಟ್ಟೇವು ಕಾವೇರಿ ಕೊಡೆವು', 'ಕನ್ನಡಕ್ಕಾಗಿ ಕೈಯೆತ್ತು' ಇತ್ಯಾದಿ ಸುಭಾಷಿತ ಬರೆಯಿಸಿ, 'ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು' ಹಾಡುಗಳನ್ನು ಸಣ್ಣಗೆ ನುಡಿಸುತ್ತ, ಅವರು ಬಸ್ಸನ್ನು ಕನ್ನಡಾಂಬೆಯ ರಥವಾಗಿ ರೂಪಾಂತರಿಸಿರುತ್ತಾರೆ. ಆದರೆ ನಿಜಕ್ಕೂ ವಿಸ್ಮಯ ಹುಟ್ಟಿಸುವುದು ಈ ಅಲಂಕಾರಪ್ರಿಯರಲ್ಲ; ಚಾಲನೆಯಲ್ಲಿರುವಾಗಲೇ ಹೊಗೆಸೊಪ್ಪು ಸೇವಿಸುವ ಸವ್ಯಸಾಚಿ ವ್ಯಸನಿಗಳದ್ದು. ಸ್ಟೇರಿಂಗ್ ತಿರುಗಿಸುತ್ತಲೇ ಪ್ಲಾಸ್ಟಿಕ್‌ಚೀಲದಿಂದ ತಂಬಾಕು ತೆಗೆದು, ಟ್ಯೂಬು ಹಿಚುಕಿ ಸುಣ್ಣ ತೆಗೆದು, ಅಂಗೈಯಲ್ಲಿ ಎರಡನ್ನೂ ಕೂಡಿಸಿ, ಉಜ್ಜಿ ಕಸರು ತೆಗೆದು, ಉರುಬಿ ಉಂಡೆಮಾಡಿ, ಮೂರಂಗುಲಿಯಲ್ಲಿ ಹಿಡಿದು ಮುಂಬಲ್ಲುತುಟಿಯ ಮಧ್ಯೆ ಇರಿಸಿಕೊಳ್ಳುವುದು ಸಣ್ಣ ಸಾಧನೆಯಲ್ಲ. ತಂಬಾಕು ರಸ ಒಳಗಿಳಿದ ಮೇಲೆ ಇದ್ದಕ್ಕಿದ್ದಂತೆ ಬಸ್ಸು ವೇಗ ಹೆಚ್ಚಿಸಿಕೊಳ್ಳುವುದನ್ನೂ ಗಮನಿಸಬಹುದು.

ಚಾಲಕನ ಆಜುಬಾಜಿನ ಸೀಟುಗಳಲ್ಲಿ ಕುಳಿತ ಪ್ಯಾಸೆಂಜರುಗಳು, ಸಾಮಾನ್ಯವಾಗಿ ಘೋರ ತಪಗೈದು ಶಿವನನ್ನು ಒಲಿಸಿಕೊಳ್ಳುವ ಭಕ್ತರಂತೆ, ಚಾಲಕನ ತುಷ್ಟೀಕರಣಕ್ಕೆ ಯತ್ನಿಸುವರು. ಕೆಲವರು ತಾಂಬೂಲ ಆಫರ್ ಮಾಡುವರು; ಸಂಬಳ, ಮಕ್ಕಳಮರಿ ವಿಷಯ ವಿಚಾರಿಸುವರು; ಪ್ರಸ್ತುತ ಸಾಲಿನ ಬೆಳೆಮಳೆ ಚರ್ಚೆಯಾಗುವುದು; ವರ್ತಮಾನದ ರಾಜಕಾರಣದ ಮೇಲೆ ಟೀಕೆಟಿಪ್ಪಣಿ ನಡೆದು ಕ್ಯಾಬಿನ್ನು ಪಾರ್ಲಿಮೆಂಟಾಗುವುದು. ಎದುರು ಲಾರಿ ಸೈಡು ಕೊಡದಿದ್ದರೆ ಮೆಂಬರನೊಬ್ಬ 'ನೋಡುನೋಡು ಹೆಂಗ ಮೈಮ್ಯಾಲ ಬರ್ತಾನ? ಈ ಪಂಜಾಬಿಗಳಿಗೆ ಭಾಳಸೊಕ್ಕು' ಎನ್ನುವನು. ಅದಕ್ಕೆ ಪ್ರತಿಪಕ್ಷದವನು 'ಪಾಪ! ಹೆಂಡರು ಮಕ್ಕಳು ಬಿಟ್ಟು ಎಷ್ಟುದಿನ ಆಗಿರ್ತತೋ ಏನೊ? ಸಾಕಾಗಿರ್ತಾರ' ಎಂದು ತಿದ್ದುಪಡಿ ಸೂಚಿಸುವನು. ಮನಸ್ಸು ಮಾಡಿದರೆ ಉಚಿತವಾಗಿ ಕೈಲಾಸ ಕಾಣಿಸಬಲ್ಲ ಚಾಲಕರನ್ನು ಸಾಮಾನ್ಯವಾಗಿ ಯಾರೂ ರೇಗಿಸುವುದಿಲ್ಲ. ಆದರೆ ಬಸ್ಸು ತೀರ ನಿಧಾನವಾದರೆ, ಲಾರಿಗಳೂ ಓವರ್‌ಟೇಕ್ ಮಾಡಿದರೆ, ಸಹನೆಯ ಬುಗ್ಗೆ ಒಡೆಯುತ್ತದೆ. ಲಗ್ನಕ್ಕೊ ಮಣ್ಣಿಗೊ ಹೋಗುವವರ ಚಡಪಡಿಕೆ ಹೇಳತೀರದು. 'ಯಪ್ಪಾ, ಊರು ಮುಟ್ಟಸ್ತೀಯೋ ಇಲ್ಲವೊ? ಚಕಡಿ ಹೊಡದಂಗ ಹೊಡೀತಿದ್ದಿ?' ಎಂದು ಹಿಂಬಾಣ ಬಿಡುವರು. ನರಿಯ ಊಳಿಗೆ ಗಾಂಭೀರ್ಯ ಕಳೆದುಕೊಳ್ಳದ ಗಜದಂತೆ, ಚಾಲಕರು ಟೀಕೆಗಳನ್ನು ಸಾಮಾನ್ಯವಾಗಿ ಅಲಕ್ಷಿಸುವರು. ಊಳು ಅತಿಯಾದರೆ ಮಾತ್ರ ಗಾಡಿಯನ್ನು ಸೈಡಿಗೆ ಹಚ್ಚಿ, ಸಿಂಹಾವಲೋಕನ ಕ್ರಮದಲ್ಲಿ ತಿರುಗಿ 'ಯಾರ್ರೀ ಅದು ಗೊಣಗೊಣ? ಸ್ಟೇರಿಂಗ್ ಮ್ಯಾಲ ಕುಂದರಬರ್ರೀ ತಿಳೀತದ. ರಸ್ತಿ ನೋಡಿದರೆ ತಿಪ್ಪಿಗುಂಡಿ ಆಗ್ಯದ. ಡಿಪೊ ಮ್ಯಾನೇಜರ್ ಬದ್ಮಾಶ್ ನನಮಗ, ಖರಾಬ್ ಗಾಡಿ ಹಚ್ಚಗೊಟ್ಟಾನ' ಎಂದು ಆವಾಜ್ ಹಾಕುವರು. ಬಸ್ಸಿನಲ್ಲಿ ಸಡನ್ನಾಗಿ ಘೋರನಿಶ್ಶಬ್ದ ನೆಲೆಸುವುದು; ಚಾಲಕನನ್ನು ಬಸ್ಸಿನ ಬಿಡಿಭಾಗ ಎಂದು ಭಾವಿಸಿದ್ದವರಿಗೆ, ಅವನೂ ಸುಖದುಃಖವುಳ್ಳ ಮನುಷ್ಯನೆಂದು ಜ್ಞಾನೋದಯವಾಗುವುದು. ಈಗ ಸಂಸತ್ ಚರ್ಚೆ ರಸ್ತೆ ಇಲಾಖೆಯತ್ತ ಹೊರಳುವುದು. 'ಮ್ಯಾಲಿಂದ ಕೆಳತನ ಎಲ್ಲ ರೊಕ್ಕ ತಿಂದು ರಸ್ತಿ ಕೆಡಿಸ್ಯಾರ. ಒಂದ್ ಮಳೀಗೇ ಕಿತ್ತೋಗ್ಯದ. ಅವರಾದರೂ ಹೆಂಗ ನಡಸಬೇಕು' ಎಂದು ಚಾಲಕನ ಮುಖನೋಡುವರು. ಆತನೀಗ ಭಕ್ತರಿಂದ ಫಲಪುಷ್ಪಗಳನ್ನು ನಿರ್ಲಿಪ್ತವಾಗಿ ಒಪ್ಪಿಸಿಕೊಳ್ಳುವ ವಾಸುದೇವ.

ಪಯಣದಲ್ಲಿ ವಿಶಿಷ್ಟ ಅನುಭವ ಸಿಗುವುದು ಮುಖಾಮುಖಿ ಆಸನ ವ್ಯವಸ್ಥೆಯಲ್ಲಿ. ನಾಟಕ ರೋಚಕವಾಗಬೇಕಾದರೆ ಜನ ಅಡಕಲಾಗಿ ಕೂರುವ ಕೆಳದರ್ಜೆ ಬೋಗಿಯಲ್ಲಿರಬೇಕು. ವಾತಾನುಕೂಲ ಕೋಚುಗಳಲ್ಲಿ ಸಹಪಯಣಿಗರು ಮಾತಾಡುವುದೇ ಕಡಿಮೆ. ಏಸಿಯ